## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.,-247/2019/ಡಿ.ಆರ್.ಇ-2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 16/12/2019

### ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಮೂಡಬಿದ್ರೆ ತಾಲ್ಲೂಕು ಪ್ರಾಂತ್ಯ ಗ್ರಾಮದ ದೂರುದಾರರ 2 ಎಕರೆ ಭತ್ತ ಬೆಳೆಯುವ ಕೃಷಿ ಜಮೀನಿಗೆ ಹೊಂದಿಕೊಂಡು ಇರುವ ಪುರಸಭೆಯ ನೀರು ಹೋಗುವ ತೋಡಿನಲ್ಲಿ ಪಟ್ಟಣ ವ್ಯಾಪ್ತಿಯ ಎಲ್ಲಾ ಪ್ಲಾಸ್ಟಿಕ್, ಗಾಜಿನ ಚೂರು, ಕೊಳಚೆ ನೀರು, ಪಟ್ಟಣದ ತ್ಯಾಜ್ಯಗಳು ಬಂದು ದೂರುದಾರರ ಜಮೀನಿನಲ್ಲಿ ತುಂಬಿಕೊಂಡು, ದೂರುದಾರರ ಕೃಷಿ ಜಮೀನಿಗೆ ಆಗುವ ತೊಂದರೆಯನ್ನು ಪರಿಹರಿಸಿ, ಅವರು ಕೃಷಿ ಭೂಮಿಯನ್ನು ಸುರಕ್ಷಿತವಾಗುವಂತೆ ಕ್ರಮ ಜರುಗಿಸಬೇಕು, ಸರ್ಕಾರಿ ಸರ್ವೆ ನಂ.84/1/1 ರಲ್ಲಿ (ದೂರುದಾರರ ಕೃಷಿ ಭೂಮಿಗೆ ತಾಗಿ) ಶ್ರೀಮತಿ ವಸಂತಿ ಕೋಟ್ಯಾನ್ ಅವರು ಮನೆಯ ಸುತ್ತಲೂ ನಿಯಮಾನುಸಾರ ಸೆಟ್ ಬ್ಯಾಕ್ ಬಿಡದೆ, ರಸ್ತೆ ಮಾರ್ಜಿನ್ ಬಿಡದೆ ಮನೆ ಕಟ್ಟಿ, ಪುರಸಭೆಯಿಂದ ಪರವಾನಿಗೆ ಪಡೆಯದೆ ವಾಣಿಜ್ಯ ಉದ್ದೇಶಕ್ಕೆ ಬಳಸಿದ್ದಾರೆಂದು ದೂರುದಾರರು ಆಪಾದಿಸಿರುವ ಶ್ರೀಮತಿ ವಾಸಂತಿ ಕೊಟ್ಯಾನ್ ರವರಿಗೆ ನಿಯಮಾನುಸಾರ ನೋಟಿಸ್ ನೀಡಿ ಕಾನೂನಿನ ಪ್ರಕಾರ ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ಎಸ್.ರಾಮದಾಸ ಶಬರಾಯ ಬಿನ್ ಗೋಪಾಲಕೃಷ್ಣ ಶಿಬರಾಯ, ಮೂಡಬಿದ್ರೆ, ಸಮೃದ್ಧಿ ಲಡಿ ಪ್ರಾಂತ್ಯ ಗ್ರಾಮ, ಮೂಡಬಿದ್ರೆ, ಕೋ-ಆಪರೇಟಿವ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಎದುರು, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ತಹಶೀಲ್ದಾರ್, ತಾಲ್ಲೂಕು ಕಛೇರಿ, ಮೂಡಬಿದ್ರೆ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಮತ್ತು, (2) ಮುಖ್ಯಾಧಿಕಾರಿಗಳು, ಟೌನ್ ಮುನ್ಸಿಪಲ್ ಕೌನ್ಸಿಲ್, ಮೂಡಬಿದ್ರೆ, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ಮೂಡಬಿದ್ರೆ ತಾಲ್ಲೂಕು ಪ್ರಾಂತ್ಯ ಗ್ರಾಮದಲ್ಲಿ 2 ಎಕರೆ ಕೃಷಿ ಜಮೀನಿನಲ್ಲಿ ಭತ್ತ ಬೆಳೆಯುತ್ತಿದ್ದು, ಸದರಿ ಜಮೀನಿಗೆ ಹೊಂದಿಕೊಂಡು ಪುರಸಭೆಯ ನೀರು ಹೋಗುವ ತೋಡು ಇರುತ್ತದೆ. ಸದರಿ ನೀರು ಹರಿಯುವ ತೋಡಿಗೆ ಮೋರಿ ಅಳವಡಿಸಿದ್ದು, ಅದರಿಂದ ಪಟ್ಟಣ ವ್ಯಾಪ್ತಿಯ ಎಲ್ಲಾ ಪ್ಲಾಸ್ಟಿಕ್, ಗಾಜಿನ ಚೂರು, ಕೊಳಚೆ ನೀರು, ಪಟ್ಟಣದ ತ್ಯಾಜ್ಯಗಳು ಬಂದು ದೂರುದಾರರ ಜಮೀನಿನಲ್ಲಿ ತುಂಬಿಕೊಂಡು, ದೂರುದಾರರ ಕೃಷಿ ಭೂಮಿ ಬರಡಾಗುತ್ತಿದೆ. ಆದ್ದರಿಂದ ಮೋರಿಯ ಸ್ಥಳವನ್ನು ಹಾಗೂ ನೀರಿನ ಹರಿವನ್ನು ಬದಲಿಸಿ ತಮ್ಮ ಕೃಷಿ ಭೂಮಿಯನ್ನು ರಕ್ಷಿಸಲು ಕೋರಿದ್ದರೂ, ಎದುರುದಾರರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಮತ್ತು ಸರ್ಕಾರಿ ಸರ್ವೆ ನಂ.84/1/1 ರಲ್ಲಿ (ದೂರುದಾರರ ಕೃಷಿ ಭೂಮಿಗೆ ತಾಗಿ) ಶ್ರೀಮತಿ ವಸಂತಿ ಕೋಟ್ಯಾನ್ ಅವರು ಮನೆಯ ಸುತ್ತಲೂ ನಿಯಮಾನುಸಾರ ಸೆಟ್ ಬ್ಯಾಕ್ ಬಿಡದೆ, ರಸ್ತೆ ಮಾರ್ಜಿನ್ ಬಿಡದೆ ಮನೆ ಕಟ್ಟಿ, ಪುರಸಭೆಯಿಂದ ಪರವಾನಿಗೆ ಪಡೆಯದೆ ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿದ್ದಾರೆ. ಈ ಬಗ್ಗೆ ಎದುರುದಾರರು ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ದ ಸೂಕ್ತ ಕ್ರಮಕೈಗೊಳ್ಳಲು ಕೋರಿರುತ್ತಾರೆ.

3. ಎದುರುದಾರರು ತಮ್ಮ ಆಕ್ಷೇಪಣೆ ಸಲ್ಲಿಸಿದ್ದಾರೆ. 1ನೇ ಎದುರುದಾರರು ದೂರುದಾರರ 2 ಎಕರೆ ಕೃಷಿ ಜಮೀನಿಗೆ ಹೊಂದಿಕೊಂಡಂತೆ ಪುರಸಭೆಯ ನೀರು ಹೋಗುವ ತೋಡು ಇರುತ್ತದೆ, ಸದರಿ ನೀರು ಹರಿಯುವ ತೋಡಿಗೆ ಮೋರಿ ಅಳವಡಿಸಿದ್ದು, ಅದರಿಂದ ಪಟ್ಟಣ ವ್ಯಾಪ್ತಿಯ ಎಲ್ಲಾ ಪ್ಲಾಸ್ಟಿಕ್, ಗಾಜಿನ ಚೂರು, ಕೊಳಚೆ ನೀರು, ಪಟ್ಟಣದ ತ್ಯಾಜ್ಯಗಳು ಬಂದು ದೂರುದಾರರ ಜಮೀನಿನಲ್ಲಿ ತುಂಬಿಕೊಂಡು, ದೂರುದಾರರ ಕೃಷಿ ಭೂಮಿ ಬರಡಾಗುತ್ತಿದೆ ಎಂಬುದು ಪುರಸಭೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಎನ್ನುವ ಬಗ್ಗೆ ಉಲ್ಲೇಖಿಸಿದ್ದಾರೆ.

4. 2ನೇ ಎದುರುದಾರರು ಶ್ರೀಮತಿ ವಸಂತಿ ಕೊಟ್ಯಾನ್ ಇವರು ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿ ಕಟ್ಟಡ ಕಟ್ಟಿದ್ದಾರೆ ಎನ್ನುವುದಕ್ಕೆ ಸದರಿ ಒತ್ತುವರಿಯನ್ನು ದೂರುದಾರರ ಸಮಕ್ಷಮವೇ ತೆರವುಗೊಳಿಸಲಾಗಿದೆ ಎಂದು ಉಲ್ಲೇಖಿಸಿ ಪುರಸಭೆ ಇವರ ತನಿಖಾ ವರದಿಯನ್ನು ಹಾಜರುಪಡಿಸಿದ್ದಾರೆ. ಆದರೆ, ದೂರುದಾರರ 2 ಎಕರೆ ಕೃಷಿ ಜಮೀನಿಗೆ ಹೊಂದಿಕೊಂಡಂತೆ ಪುರಸಭೆಯ ನೀರು ಹೋಗುವ ತೋಡು ಇರುತ್ತದೆ, ಸದರಿ ನೀರು ಹರಿಯುವ ತೋಡಿಗೆ ಮೋರಿ ಅಳವಡಿಸಿದ್ದು, ಅದರಿಂದ ಪಟ್ಟಣ ವ್ಯಾಪ್ತಿಯ ಎಲ್ಲಾ ಪ್ಲಾಸ್ಟಿಕ್, ಗಾಜಿನ ಚೂರು, ಕೊಳಚೆ ನೀರು,

247

ಪಟ್ಟಣದ ತ್ಯಾಜ್ಯಗಳು ಬಂದು ದೂರುದಾರರ ಜಮೀನಿನಲ್ಲಿ ತುಂಬಿಕೊಂಡು, ದೂರುದಾರರ ಕೃಷಿ ಭೂಮಿ ಬರಡಾಗುತ್ತಿದೆ ಎನ್ನುವ ಬಗ್ಗೆ ಯಾವುದೇ ರೀತಿಯ ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

5. 2ನೇ ಎದುರುದಾರರಿಗೆ ದೂರುದಾರರ 2 ಎಕರೆ ಕೃಷಿ ಜಮೀನಿಗೆ ಹೊಂದಿಕೊಂಡಂತೆ ಪುರಸಭೆಯ ಮೋರಿ ನೀರು ಹರಿದು ಪಟ್ಟಣ ವ್ಯಾಪ್ತಿಯ ಎಲ್ಲಾ ಪ್ಲಾಸ್ಟಿಕ್, ಗಾಜಿನ ಚೂರು, ಕೊಳಚೆ ನೀರು, ಪಟ್ಟಣದ ತ್ಯಾಜ್ಯಗಳು ಬಂದು ದೂರುದಾರರ ಜಮೀನಿನಲ್ಲಿ ತುಂಬಿಕೊಂಡು, ದೂರುದಾರರ ಕೃಷಿ ಭೂಮಿ ಬರಡಾಗುತ್ತಿದೆ ಎನ್ನುವ ಆಪಾದನೆಗೆ ತೆಗೆದುಕೊಂಡ ಕ್ರಮ ಏನು ಅಥವಾ ಆಕ್ಷೇಪಣೆ ಏನು ಎಂದು ಕೇಳಲಾಗಿತ್ತು.

6. 2ನೇ ಎದುರುದಾರರು ದಿನಾಂಕ: 14/08/2019 ರಂದು ಪತ್ರ ಬರೆದು ಅದರಲ್ಲಿ, ಕಿರಿಯ ಅಭಿಯಂತರರು ಸ್ಥಳ ತನಿಖೆ ನಡೆಸಿ ವರದಿ ನೀಡಿದ್ದು, ಅರ್ಜಿದಾರರ ಮನೆಯ ಎದುರುಗಡೆ ಇರುವ ಕೃಷಿ ಭೂಮಿಗೆ ತಾಗಿಕೊಂಡಿರುವ ತೋಡಿನಲ್ಲಿ ಅನಾಧಿಕಾಲದಿಂದಲೂ ಮಳೆ ನೀರು ಹರಿಯುತ್ತಿದ್ದು, ಆ ತೋಡಿಗೆ ಪರಂಬೋಪು ತೋಡಿನ ಸಂಪರ್ಕ ಇರುತ್ತದೆ. ಈ ತೋಡಿನಲ್ಲಿ ಮಳೆ ನೀರು ಮಾತ್ರ ಹರಿಯುತ್ತಿದ್ದು, ಯಾವುದೇ ಕೊಳಚೆ ನೀರು ಹರಿಯುತ್ತಿಲ್ಲ. ತೋಡಿನಲ್ಲಿ ತುಂಬಿರುವ ಪೋಡನ್ನು ತೆರವುಗೊಳಿಸಿ ಸ್ವಚ್ಚಗೊಳಿಸಲಾಗಿದೆ, ಈಗ ಸರಾಗವಾಗಿ ನೀರು ಹರಿಯತ್ತಿದ್ದು, ದೂರುದಾರರ ಕೃಷಿ ಭೂಮಿಗೆ ಯಾವುದೇ ರೀತಿಯ ಬಾದಕ ಉಂಟಾಗಿಲ್ಲ. ಆದ್ದರಿಂದ, ಪ್ರಕರಣವನ್ನು ಮುಕ್ತಾಯ ಮಾಡಬೇಕೆಂದು ಕೋರಿದ್ದರು.

7. ಎದುರುದಾರರು ತಮ್ಮ ಆಕ್ಷೇಪಣೆಯನ್ನು ಹೊರತುಪಡಿಸಿ ಯಾವ ಕ್ರಮ ಕೈಗೊಂಡಿದ್ದಾರೆ ಎನ್ನುವ ಬಗ್ಗೆ ಮತ್ತು 2ನೇ ಎದುರುದಾರರು ಹೇಳಿದಂತೆ ತಮ್ಮ ಕಿರಿಯ ಅಭಿಯಂತರರು ಸ್ಥಳದ ತನಿಖೆ ಮಾಡಿ ಅಕ್ರಮವನ್ನು ತೆರವುಗೊಳಿಸಿ ದೂರುದಾರರಿಗೆ ಆಗುವ ಹಾನಿಯನ್ನು ತಪ್ಪಿಸಲಾಗಿದೆ ಎನ್ನುವ ವರದಿಯನ್ನು ಹೊರತುಪಡಿಸಿ ಸ್ಥಳದಲ್ಲಿ ದೂರುದಾರರು ಹಾಗೂ ಸ್ವತಂತ್ರ ವ್ಯಕ್ತಿಗಳ ಸಮಕ್ಷಮದಲ್ಲಿ ಆ ಬಗ್ಗೆ ಮಹಜರ್ ಕ್ರಮ ಜರುಗಿಸಿದ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲ. ಅದು ಅಲ್ಲದೇ, ದೂರುದಾರರ ಆಪಾದನೆಯಂತೆ ಅವರಿಗೆ ಆಗಿರುವ ಮೂಲಭೂತ ಸೌಕರ್ಯದ ತೊಂದರೆಗೆ ಆರೋಗ್ಯ ಭದ್ರತೆಗೆ ಮತ್ತು ಅನುಕೂಲಕ್ಕೆ ಜರುಗಿಸಿದ ಕ್ರಮದ ಅಂದರೆ ಅಲ್ಲಿರುವ ಕೊಳಚೆಯನ್ನು ತೆಗೆದು

ಹಾಕಿದ ಬಗ್ಗೆ ಯಾವುದೇ ರೀತಿಯ ಛಾಯಾಚಿತ್ರಗಳನ್ನು ಅಥವಾ ಸ್ಥಳೀಯರ ಹೇಳಿಕೆಗಳನ್ನು ಅಥವಾ ದೂರುದಾರರ ಹೇಳಿಕೆಗಳನ್ನು ಹಾಜರುಪಡಿಸಿಲ್ಲ.

8. ಸಂಖ್ಯೆ: ಕಂಇ 160 ಎಂಜಿಪಿ 2019, ದಿನಾಂಕ: 27/05/2013ರ ಕರ್ನಾಟಕ ಸರ್ಕಾರ ಸುತ್ತೋಲೆ ಅನ್ವಯ ಸರ್ಕಾರಿ ಭೂಮಿಗಳ ಸಂರಕ್ಷಣೆ ಹಾಗೂ ಒತ್ತುವರಿಯಾದಂತಹ ಸರ್ಕಾರಿ ಜಮೀನುಗಳನ್ನು ತೆರೆವುಗೊಳಿಸುವಂತೆ ಹಾಗೂ ಸರ್ಕಾರಿ ಭೂಮಿಗಳನ್ನು ಅಳತೆ ಮಾಡಿ ಒತ್ತುವರಿ ಪ್ರದೇಶವನ್ನು ತೆರೆವುಗೊಳಿಸುವುದು ಅಲ್ಲದೇ ಸರ್ಕಾರದ ವಶಕ್ಕೆ ಪಡೆಯುವುದು, ಸರ್ಕಾರದ ವಶಕ್ಕೆ ಪಡೆದುಕೊಂಡ ನಂತರ ಬೇಲಿ ಹಾಕಿ ಸಂರಕ್ಷಿಸುವುದು, ಅಲ್ಲದೇ ಒತ್ತುವರಿದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ನಿಯಮ 192(ಎ) ಅಡಿಯಲ್ಲಿ ದಾಖಲಿಸುವುದು ಅಂತಾ ಉಲ್ಲೇಖಿಸಲಾಗಿದೆ.

9. ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಗಣನೆಗೆ ತೆಗೆದುಕೊಂಡಾಗ, ದೂರುದಾರರು ಆಪಾದಿಸಿದಂತೆ ಸರ್ಕಾರಿ ಸರ್ವೆ ನಂ.84/1/1 ರಲ್ಲಿ (ದೂರುದಾರರ ಕೃಷಿ ಭೂಮಿಗೆ ತಾಗಿ) ಶ್ರೀಮತಿ ವಸಂತಿ ಕೋಟ್ಯಾನ್ ಅವರು ಮನೆಯ ಸುತ್ತಲೂ ನಿಯಮಾನುಸಾರ ಸೆಟ್ ಬ್ಯಾಕ್ ಬಿಡದೆ, ರಸ್ತೆ ಮಾರ್ಜಿನ್ ಬಿಡದೆ ಮನೆ ಕಟ್ಟಿ, ಪುರಸಭೆಯಿಂದ ಪರವಾನಿಗೆ ಪಡೆಯದೆ ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿದ್ದಾರೆ ಎನ್ನುವ ಆಪಾದನೆಯ ಬಗ್ಗೆ ಎದುರುದಾರರು ಯಾವ ಕ್ರಮ ಕೈಗೊಂಡಿದ್ದಾರೆ ಎನ್ನುವ ಬಗ್ಗೆ ಸ್ಪಷ್ಟ ದಾಖಲೆ ಇರುವುದಿಲ್ಲ. ಇದರಿಂದ ಕಂಡುಬರುವುದೇನೆಂದರೆ, ದೂರುದಾರರ ಈ ಆಪಾದನೆಗೆ ಎದುರುದಾರರು ಸ್ಪಂದಿಸಿಲ್ಲ ಮತ್ತು ಯಾವುದೇ ಕ್ರಮಕೈಗೊಂಡಿರುವುದಿಲ್ಲ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

10. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ,

(ಅ) ಮೂಡಬಿದ್ರೆ ತಾಲ್ಲೂಕು ಪ್ರಾಂತ್ಯ ಗ್ರಾಮದ ದೂರುದಾರರ 2 ಎಕರೆ ಭತ್ತ ಬೆಳೆಯುವ ಕೃಷಿ ಜಮೀನಿಗೆ ಹೊಂದಿಕೊಂಡು ಇರುವ ಪುರಸಭೆಯ ನೀರು ಹೋಗುವ ತೋಡಿನಲ್ಲಿ ಪಟ್ಟಣ ವ್ಯಾಪ್ತಿಯ ಎಲ್ಲಾ ಪ್ಲಾಸ್ಟಿಕ್, ಗಾಜಿನ ಚೂರು, ಕೊಳಚೆ ನೀರು, ಪಟ್ಟಣದ ತ್ಯಾಜ್ಯಗಳು ಬಂದು ದೂರುದಾರರ ಜಮೀನಿನಲ್ಲಿ ತುಂಬಿಕೊಂಡು,

 247

ದೂರುದಾರರ ಕೃಷಿ ಜಮೀನಿಗೆ ಆಗುವ ತೊಂದರೆಯನ್ನು ಪರಿಹರಿಸಿ, ಅವರು ಕೃಷಿ ಭೂಮಿಯನ್ನು ಸುರಕ್ಷಿತವಾಗುವಂತೆ ಕ್ರಮ ಜರುಗಿಸಬೇಕು,

(ಆ) ಸರ್ಕಾರಿ ಸರ್ವೆ ನಂ.84/1/1 ರಲ್ಲಿ (ದೂರುದಾರರ ಕೃಷಿ ಭೂಮಿಗೆ ತಾಗಿ) ಶ್ರೀಮತಿ ವಸಂತಿ ಕೋಟ್ಯಾನ್ ಅವರು ಮನೆಯ ಸುತ್ತಲೂ ನಿಯಮಾನುಸಾರ ಸೆಟ್ ಬ್ಯಾಕ್ ಬಿಡದೆ, ರಸ್ತೆ ಮಾರ್ಜಿನ್ ಬಿಡದೆ ಮನೆ ಕಟ್ಟಿ, ಪುರಸಭೆಯಿಂದ ಪರವಾನಿಗೆ ಪಡೆಯದೆ ವಾಣಿಜ್ಯ ಉದ್ದೇಶಕ್ಕೆ ಬಳಸಿದ್ದಾರೆಂದು ದೂರುದಾರರು ಆಪಾದಿಸಿರುವ ಶ್ರೀಮತಿ ವಾಸಂತಿ ಕೊಟ್ಯಾನ್ ರವರಿಗೆ ನಿಯಮಾನುಸಾರ ನೋಟಿಸ್ ನೀಡಿ ಕಾನೂನಿನ ಪ್ರಕಾರ ಸೂಕ್ತ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

16-12-19

**[ನ್ಯಾಯಮೂರ್ತಿ ಬಿ.ಎಸ್.ಪಾಟೀಲ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**